# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2131

ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ
(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 25.03.2026

ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಉದ್ದೇಶಗಳಿಗೆಂದು ವಿವಿಧ ಸಂಸ್ಥೆಗಳಿಗೆ ಜಮೀನು ಹಂಚಿಕೆ/ಬಾಡಿಗೆ/ಲೀಸ್ ವಿಧಗಳಲ್ಲಿ ಹಸ್ತಾಂತರ ಮಾಡಲಾಗಿದೆಯೇ; | ಕಳೆದ ಮೂರು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಂದಾಯ ಇಲಾಖೆಯಿಂದ ಶೈಕ್ಷಣಿಕ ಉದ್ದೇಶಕ್ಕೆಂದು ಜಮೀನು ಮಂಜೂರು ಮಾಡಿರುವ ಮತ್ತು ಗುತ್ತಿಗೆ ಆಧಾರದ ಮೇಲೆ ನೀಡಿರುವ ವಿವರಗಳು ಈ ಕೆಳಕಂಡಂತಿವೆ:-<br>1. ಹುದಾ ಎಜುಕೇಷನ್ ಮೈನಾರಿಟಿ ಸೊಸೈಟಿ ಬಳ್ಳಾರಿ ಇವರಿಗೆ ಗುತ್ತಿಗೆ ನೀಡಲಾಗಿದ್ದ ಬಳ್ಳಾರಿ ನಗರದ ಟಿ.ಎಸ್. ನಂಬರ್ 8, ವಾರ್ಡ್ ನಂಬರ್ 5, ಬ್ಲಾಕ್ ನಂ.1 ರಲ್ಲಿನ 1.20 ಎಕರೆ ಜಮೀನನ್ನು ಸರ್ಕಾರಿ ಆದೇಶ ಸಂಖ್ಯೆ:ಕಂಇ 25 ಎಲ್‌ಜಿಇ 2022, ದಿನಾಂಕ:27.03.2023 ರಂತೆ ಜಮೀನಿನ ಕೃಷಿಯೇತರ ಮಾರುಕಟ್ಟೆ ಮೌಲ್ಯದ ಶೇಕಡ 100 ರಷ್ಟನ್ನು ವಿಧಿಸಿ ಖಾಯಂ ಆಗಿ ಮಂಜೂರು ಮಾಡಲಾಗಿದ್ದು, ಸದರಿ ಮೊತ್ತವನ್ನು ಪಾವತಿಸುವಂತೆ ಸಂಸ್ಥೆಗೆ ನೋಟೀಸ್ ನೀಡುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ.<br>2. ರಾಯಚೂರು ಜಿಲ್ಲೆ, ರಾಯಚೂರು ತಾಲ್ಲೂಕು, ಯರಮರಸ್ ಗ್ರಾಮದ ಸ.ನಂ.55/*/1ಅ ರಲ್ಲಿ 14 ಗುಂಟೆ ಜಮೀನನ್ನು ಬಡ ವಿದ್ಯಾರ್ಥಿಗಳ ಉಚಿತ ವಸತಿ ನಿಲಯ ನಿರ್ಮಾಣಕ್ಕಾಗಿ ಸರ್ಕಾರಿ ಆದೇಶ ಸಂಖ್ಯೆ ಕಂಇ 38 ಎಲ್‌ಜಿಜಿ 2023, ದಿನಾಂಕ07.12.2024 ರಂತೆ ಜಮೀನಿನ ಕೃಷಿಯೇತರ ಮಾರುಕಟ್ಟೆ ಮೌಲ್ಯದ ಶೇಕಡ 10 ರಷ್ಟನ್ನು ವಿಧಿಸಿ, ಕರ್ನಾಟಕ ಪ್ರದೇಶ ಕುರುಬರ ಸಂಘ, ಬೆಂಗಳೂರು ಇವರಿಗೆ ಮಂಜೂರು ಮಾಡಲಾಗಿದೆ. |
| ಆ) | ಹಂಚಿಕೆ ಮಾಡಲಾದ ಜಮೀನಿಗೆ ಎಷ್ಟು ಬಾಡಿಗೆ ಅಥವಾ ಹಂಚಿಕೆ ಮಾಡಿದಲ್ಲಿ ಎಷ್ಟು ದರ ನಿಗದಿಪಡಿಸಲಾಗಿದೆ; ಜಿಲ್ಲಾವಾರು ಸಂಸ್ಥೆವಾರು ಮಾಹಿತಿ ನೀಡುವುದು; | |

| | | |
|---|---|---|
| ಇ) | ಮೊದಲೇ ಲೀಸ್/ಬಾಡಿಗೆಯಲ್ಲಿ ನೀಡಿ ಅವಧಿ ಮುಕ್ತಾಯವಾಗಿದ್ದಲ್ಲಿ ನವೀಕರಣ ಮಾಡಲಾಗಿದೆಯೇ; ಸಂಸ್ಥೆವಾರು ಮಾಹಿತಿ ನೀಡುವುದು; | ಕಳೆದ ಮೂರು ವರ್ಷಗಳಲ್ಲಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ. |
| ಈ) | ನವೀಕರಣ ನಂತರ ಹಾಗೂ ಮೊದಲಿನ ಬಾಡಿಗೆ ವ್ಯತ್ಯಾಸದ ಕುರಿತು ಸಂಸ್ಥೆವಾರು ವಿವರ ನೀಡುವುದು; | ಕಳೆದ ಮೂರು ವರ್ಷಗಳಲ್ಲಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ. |
| ಉ) | ಇಲ್ಲಿಯವರೆಗೆ ನವೀಕರಣಗೊಳಿಸದ ಜಮೀನು ಹಿಂಪಡೆದ ಸಂಸ್ಥೆಗಳ ಜಿಲ್ಲಾವಾರು ವಿವರ ನೀಡುವುದು? | ಕಳೆದ ಮೂರು ವರ್ಷಗಳಲ್ಲಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ. |

(ಕಡತ ಸಂಖ್ಯೆ: ಆರ್‌ಡಿ 33 ಎಲ್‌ಜಿಜಿ 2026)

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು